**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ**
**ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು**

**ಸಿ.ಸಿ. ಸಂಖ್ಯೆಃ 196/2020**

ಪಿರ್ಯಾದಿದಾರರು : ದಿನೇಶಾಚಾರಿ

ವಿರುದ್ಧ

ಆರೋಪಿ : ಸುನೀಲ್ ಬಿ.ಎಸ್.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿಯ ಹೇಳಿಕೆ**

**ಪ್ರಶ್ನೆ 1:** ಈ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿದಾರರುಗಳ ಸಾಕ್ಷ್ಯಗಳನ್ನು ಕೇಳಿದ್ದೀರಾ?

**ಉತ್ತರಃ**

**ಪ್ರಶ್ನೆ 2:** ಪ್ರಾಸಾ-1 ದಿನೇಶಾಚಾರಿ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪ್ರಾಸಾ-1 ರವರನ್ನು ನಿಮ್ಮ ಕಾನೂನುಬದ್ದ ಅವಶ್ಯಕತೆಗಳಿಗಾಗಿ ದಿನಾಂಕ 10.04.2012 ರಂದು ರೂ.4,00,000/- ಗಳನ್ನು ಸಾಲವಾಗಿ ಪಡೆದುಕೊಂಡಿದ್ದು ಅದನ್ನು 6 ತಿಂಗಳ ಒಳಗೆ ತೀರಿಸುವುದಾಗಿ ಹೇಳಿದ್ದಿರೆಂದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 3:** ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಮೇಲೆ ಹೇಳಿದ ಅವಧಿಯ ನಂತರ ಪ್ರಾಸಾ 1 ರವರು ನಿಮ್ಮನ್ನು ಹಲವಾರು ಬಾರಿ

ಸಾಲವನ್ನು ಮರುಪಾವತಿಸಲು ಕೇಳಿಕೊಂಡಾಗ ಆರೋಪಿಯಾದ ನೀವು ಪ್ರಾಸಾ-1 ರವರಿಗೆ ಸುಪ್ರೀಂ ವುಡ್ ಪ್ಲೇನಿಂಗ್ ಸೆಂಟರ್ ನ ಪರವಾಗಿ ಆಂಧ್ರ ಬ್ಯಾಂಕ್, ಹಿನಕಲ್ ಶಾಖೆ, ಮೈಸೂರು ಇಲ್ಲಿನ ಚೆಕ್ಕು ಸಂಃ 524220, ದಿಃ 06.06.2013 ರೂ.4,00,000/- ಕ್ಕೆ ನೀಡಿರುತ್ತೀರೆಂದು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 4:** ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಚೆಕ್ಕನ್ನು ಫಿರ್ಯಾದುದಾರರು ದಿಃ 06-06-2013 ರಂದು ತಮ್ಮ ಬ್ಯಾಂಕ್ ಖಾತೆ ಇರುವ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್, ಬಿಳಿಕೆರೆ ಶಾಖೆ, ಹುಣಸೂರು ತಾಲ್ಲೂಕು ಇಲ್ಲಿಗೆ ನದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ಕು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ **"Funds Insufficient"** ಎಂಬ ಹಿಂಬರಹದೊಂದಿಗೆ ಮಾನ್ಯವಾಗದೆ ದಿನಾಂಕ 12.06.2013 ರಂದು ವಾಪಸ್ಸಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 5:** ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ವಿಷಯವನ್ನು ಆರೋಪಿಯಾದ ನಿಮಗೆ ತಿಳಿಸಿದಾಗ ಆರೋಪಿಯಾದ ನೀವು ಪ್ರಾಸಾ-1 ರವರಲ್ಲಿ ಪುನಃ ಅವರ ಖಾತೆಯ ಬ್ಯಾಂಕಿಗೆ ಸದರಿ ಚೆಕ್ಕನ್ನು ಹಾಜರು ಪಡಿಸಲು ಕೇಳಿಕೊಂಡ ಮೇರೆಗೆ , ಪ್ರಾಸಾ-1 ರವರು ಮತ್ತೊಮ್ಮೆ ದಿಃ 08.08.2013 ರಂದು ಚೆಕ್ಕನ್ನು ಹಾಜರುಪಡಿಸಿದಾಗ ಸದರಿ ಚೆಕ್ಕು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ **"Funds Insufficient"** ಎಂಬ 17.08.2013 ರ

ಮೆಮೋದೊಂದಿಗೆ ಮಾನ್ಯವಾಗದೆ ವಾಪಸ್ಸಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ 6:** ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ನಂತರ ತಮ್ಮ ವಕೀಲರ ಮುಖಾಂತರ ದಿಃ 27.08.2013 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ದಿಃ 28.08.2013 ರಂದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲಿ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 7:** ನಿಮ್ಮ ಪರ ಸಾಕ್ಷಿಗಳಿವೆಯೇ?

**ಉತ್ತರಃ**

**ಪ್ರಶ್ನೆ 8:** ನೀವು ಹೆಚ್ಚಿಗೆ ಹೇಳುವುದು ಏನಾದರೂ ಇದೆಯೆ?

**ಉತ್ತರಃ**

(ಮೇಲ್ಕಂಡ ಸಾಕ್ಷ್ಯದಾರರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ಕೊಟ್ಟ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

**(ಪೂಜಾ ಬೆಳಕೇರಿ)**

ದಿನಾಂಕಃ **05.12.2024**

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.